Dc-332
T-P-2

51st Year of Publication ★ SATYAVADI Daily, MYSORE 4

Reg No B G 155 ಶ್ರೀ 8-7-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ಪಿ. ಪುಟ್ಟರಾಜ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರಾಜರು ಕೋರ್ಟಿಗೆ ಹೋಗಲಿರುವರು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ವಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಯವರು ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವ ವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಜಾಕ್‌ಪಾಟ್

ಬೆಂಗಳೂರು— ನಿನ್ನೆ ನಡೆದ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಪೂಲ್ ಹಣ ವಿಲೇ ಆಗದೆ, ಶೇಖರವಾಗಿರುವ ರೂ. 20 05556 ಮುಂದಕ್ಕೆ ಇಡಲಾಗಿದೆ.

ಟೆಬಲ್ ಈವೆಂಟಿನಲ್ಲಿ 5 ಟಿಕೇಟುಗಳಿಗೆ ತಲಾ ರೂ. 15366 ದೊರೆತವು.

★

ನಗರವಾಸಿಗಳ ಸತ್ಕಾರ

ಮೈಸೂರು.....ತಾ || 2 ರಂದು ಪುರಸಭಾಧ್ಯಕ್ಷರ ಚೇಂಬರಿನಲ್ಲಿ ನಡೆದ ನಗರವಾಸಿಗಳ ಸಭೆಯಲ್ಲಿ ಆಗಸ್ಟ್ ಪ್ರಥಮ ವಾರದಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು, ಮೈಸೂರು ಸರಕಾರದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು, ಪೌರಾಡಳಿತ ಮಂತ್ರಿ ಶ್ರೀ ಪುಟ್ಟಸ್ವಾಮಿಯವರು, ವ್ಯವಸಾಯ ಮಂತ್ರಿ ಶ್ರೀ ರಾಜಯ್ಯನವರು, ಕೈಗಾರಿಕಾ ಮಂತ್ರಿ ಶ್ರೀ ರಾಜಶೇಖರಮೂರ್ತಿಯವರುಗಳಿಗೆ ನಗರವಾಸಿಗಳ ಸತ್ಕಾರ ನೀಡಲು ನಿರ್ಧರಿಸಲಾಯಿತು ; ಇದಕ್ಕಾಗಿ ಒಂದು 15 ಮಂದಿ ಸಮಿತಿ ರಚಿಸಲಾಯಿತು.

★

ಎನ್ ಜಿ ಓ ಮುಷ್ಕರ

ಭೂಪಾಲ್— ಮಧ್ಯಪ್ರದೇಶ ಸರಕಾರ 4 ಲಕ್ಷ ಎನ್ ಜಿ ಓ ಗಳಿಗೆ 67 ನೇ ಏಪ್ರಿಲ್ 1 ರಿಂದ ಕೇಂದ್ರ ಸರಕಾರದಂತೆ ತುಟ್ಟಿ ಭತ್ಯ ಕೊಡದಿದ್ದರೆ ಅನಿರ್ದಿಷ್ಟ ಕಾಲ ಮುಷ್ಕರ ನಡೆಸಲು ನಿರ್ಧರಿಸಲಾಗಿದೆ.

ಪ್ರಮಾಣ ವಚನ ಸ್ವೀಕರಿಸಲು ನಿರಾಕರಣೆ

ವಾರಣಾಸಿ— ವಾರಣಾಸಿ ನಗರದ ಪೌರಸಭೆಯ ಮುಸ್ಲಿಂ ಸದಸ್ಯರು, ಇಂಗ್ಲಿಷಿನಲ್ಲಾಗಲೀ ಹಿಂದಿಯಲ್ಲಾಗಲೀ ಪ್ರಮಾಣ ವಚನ ಸ್ವೀಕರಿಸಲೊಪ್ಪದೆ, ಗೌರ್ನರರನ್ನು ಕಾಣಲು ಲಕ್ನೋಗೆ ಹೋದರು.

★

ಪಟ್ಟಣ ನಿರ್ನಾಮ

ಹಾಂಕಾಂಗ್— ಚೀಣೀ ಸೈನ್ಯಕ್ಕೂ ನಾಗರೀಕರಿಗೂ ಕಳೆದ ತಿಂಗಳು ನಡೆದ ಸಶಸ್ತ್ರ ಹೋರಾಟದಲ್ಲಿ ಕುನ್ಮಿಂಗು ಪಟ್ಟಣ ನೆಲಸಮವಾಯಿತು.

★

ಕಲ್ಲಿನ ಕೆಲಸದವರನ್ನು ನಾಚಿಸುವಂಥ ಒಬ್ಬ ಕಾಮಾಟಿಗ (ಗಾರೇಕೆಲಸದವ) ನನ್ನು ಯಂತ್ರಗಳಿಂದ ಸಜ್ಜುಗೊಳಿಸಿ ಮಾನವ ರೂಪದ ' ರೋಬಟ್ ' ನನ್ನು ಜರ್ಮನಿಯ ಕೆಟ್‌ವಿಕ್ ರುರ್ ಎಂಬಲ್ಲಿ ಹೆರ್ ಒಟ್ಟೋ ಜಸ್ಟಸ್ ಎಂಬುವರು ತಯಾರಿಸಿರುವರು. (ಐ ಪಿ ಎಫ್)



ವ್ಯವಸಾಯ ಚಿತ್ರ

ರಾಜರು ಕೋರ್ಟಿಗೆ ಹೋಗುವರು

ನವದೆಹಲಿ— ಮಾಜಿ ರಾಜರಿಗೆ ದೊರೆಯುತ್ತಿರುವ ವಿಶೇಷ ರಿಯಾಯಿತಿ ಮತ್ತು ರಾಜಧನವನ್ನು ವಜಾಮಾಡಬೇಕೆಂಬ ಎ ಐ ಸಿ ಸಿ ಠರಾವನ್ನು ಜಾರಿಮಾಡಲು ಸರಕಾರ ನಿರ್ಧರಿಸಿರುವದರ ವಿರುದ್ಧ ನ್ಯಾಯಸ್ಥಾನ ಹತ್ತಲು ಪಟೋಡಿ ಬೇಗಂರವರ ಮನೆಯಲ್ಲಿ ನಡೆದ ರಾಜರ ಸಭೆಯಲ್ಲಿ ಅಭಿಪ್ರಾಯ ಪಡಲಾಗಿರುವುದಾಗಿ ವರದಿಯಾಗಿದೆ.

●

ಮೇಲ್ಮಟ್ಟದಲ್ಲಿ ಒಂದೇ ಭಾಷೆ

ಭೂಪಾಲ್— ವಿದ್ಯಾಭ್ಯಾಸ, ಆಡಳಿತ ಮತ್ತು ನ್ಯಾಯಾಲಯದ ಮೇಲಿನ ಮಟ್ಟದಲ್ಲಿ ಒಂದೇ ಭಾಷೆಯಿರಬೇಕೆಂದು ಸುಪ್ರೀಂ ಕೋರ್ಟಿನ ಮಾಜೀ ಮುಖ್ಯ ನ್ಯಾಯಾಧೀಶರಾದ ಡಾ || ಗಜೇಂದ್ರಗಡಕರ್ ಹೇಳಿದರು.

★

ನೈತಿಕ ಶಿಕ್ಷಣ

ಮೈಸೂರು— ಸ್ಕೂಲು ಮತ್ತು ಕಾಲೇಜುಗಳ ಪಾಠಕ್ರಮದಲ್ಲಿ ನೈತಿಕ ಶಿಕ್ಷಣ ಸೇರಿಸಬೇಕೆಂದು ವಿದ್ಯಾಮಂತ್ರಿ ಶ್ರೀ ಶಂಕರೇಗೌಡರು ಹೇಳಿದರು.

★

ಮುಷ್ಕರದ ಪರಿಣಾಮ

ಹೈದರಾಬಾದು— ದಕ್ಷಿಣ-ಮಧ್ಯ ರೈಲಿನಲ್ಲಿ ಫೈರ್‌ಮನ್‌ಗಳ ಮುಷ್ಕರದಿಂದ ಪ್ರಯಾಣಿಕರ ಮತ್ತು ಗೂಡ್ಸ್ ರೈಲುಗಳ ಓಡಾಟ ನಿಂತಿದೆ.

★

ಗಡಿ ಗುರುತು

ಶಿಲಾಂಗು— ಇಂಡೋ-ಬರ್ಮಾ ಗಡಿ ಗುರುತು ಹಾಕುವ ಕೆಲಸ ಕ್ಷಿಪ್ರದಲ್ಲೇ ಆರಂಭವಾಗಲಿದೆ.

ಭಗವಂತನ ಚರಣಕಮಲಗಳನ್ನು ತಲುಪುವ ರೀತಿ

ಶ್ರೀ ವಿಜಯಕೃಷ್ಣ ಗೋಸ್ವಾಮಿಯವರು ಒಬ್ಬ ಸಂತರೂ, ದೈವಿಕಶಕ್ತಿಯೂ ಅದ್ವೈತಪ್ರಭು ವಂಶಸ್ಥರಾಗಿಯೂ ಇದ್ದುದರಿಂದ ಅವರ ಘನತೆ ಹೆಚ್ಚಾಗಿತ್ತು. ತಮ್ಮ ಯೌವನದಲ್ಲಿ ಅವರು ಬ್ರಹ್ಮಸಮಾಜಕ್ಕೆ ಸೇರಿ ಸಂವೇದನೆ ಉಂಟುಮಾಡಿದರು. ತನ್ನ ತಾಯಿಯು ಹೃತ್ಪೂರ್ವ ಬುದ್ಧಿವಾದ ಹೇಳಿದರೂ, ತನ್ನ ಜನಿವಾರ ಕಿತ್ತುಹಾಕಿ, ಕುಟುಂಬದ ದೇವರುಗಳನ್ನು ಪೂಜಿಸುವುದನ್ನು ಬಿಟ್ಟು, ತನ್ನ ವೈದ್ಯಕೀಯ ವ್ಯಾಸಂಗವನ್ನು ತ್ಯಜಿಸಿ, ಬ್ರಹ್ಮಸಮಾಜದ ಡಾಕಾ ಶಾಖೆಯ ಮುಖ್ಯ ಬೋಧಕರಾದರು. ದೇಶದ ಯುವಕರಲ್ಲಿ ಅತ್ಯಂತ ವಿಶ್ವಾಸ ಗಳಿಸಿದರು.

ಹೀಗಿರುವಾಗ ಮತ್ತೆ ಏಕಾಏಕಿ ಹಿಂದೂ ಮತಕ್ಕೆ ಬದಲುಗೊಂಡರು. ಇದು ಬಂಗಾಳೀ ಸಮಾಜದಲ್ಲಿ ವಿಲಿವಿಲಿ ಉಂಟುಮಾಡಿತು. ಉತ್ತಮ ಧರ್ಮಬೋಧಕರಾಗಿ ಕೀರ್ತಿ ಪಡೆದರು. ಹರಿನಾಮ ಉಚ್ಚರಿಸುವುದನ್ನು ಒತ್ತಾಯಮಾಡುತ್ತಿದ್ದರು ; ಮತ್ತು ಅನೇಕಾನೇಕ ಶಿಷ್ಯರಿಗೆ ಯೋಗಸಾಧನವನ್ನು ಕಲಿಸಿದರು. ಅವರ ಸಾಧನೆ ಮತ್ತು ಅವರು ಮಾಡಿದ ಪವಾಡಗಳ ಹೆಚ್ಚು ವಿವರ ಕೊಡಲು ಸಾಧ್ಯವಿಲ್ಲ. ಅವರ ಅನುಯಾಯಿಗಳು ನಡೆಸುತ್ತಿರುವ ' ಮಂದಿರ್ " ಪತ್ರಿಕೆಯಲ್ಲಿ ಮುಂದೆ ಕೊಟ್ಟಿರುವ ಕತೆಯಿದೆ.

ಶ್ರೀ ವಿಜಯಕೃಷ್ಣರು ತಮ್ಮ ಶಿಷ್ಯ ಹರಿದಾಸನೊಡನೆ ಮಾತನಾಡುತ್ತಾ – ನಿನ್ನ ಮನಸ್ಸನ್ನು ಯಾವುದೇ ವಿಷಯದ ಮೇಲೆ ಏಕಾಗ್ರತೆ ಮಾಡಿದರೆ, ನಿನ್ನ ಗುರಿಯನ್ನು ಸಾಧಿಸಬಹುದೆಂದು ಹೇಳಿದರು.

Golden Jubilee of 'Satyavadi'

The golden jubilee of the ' Satyavadi ' is to be celebrated in July.

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ
ಅಮೋಘ ಆರಂಭ
— ಮನೋಹರಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —
Jhuk Gaya Aasman
ಜುಕ್ ಗಯಾ ಆಸ್ಮಾನ್
ಪಾತ್ರ :— ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಛೋಪ್ರ, ರಾಜೇಂದ್ರನಾಥ್
ಸಂಗೀತ— ಶಂಕರ್ ಜೈಕಿಶನ್ [ದಿನ 3 ಪ್ರದರ್ಶನಗಳು]

ಆಪೆರಾ— 5-7-68 ರಿಂದ
ಚಿತ್ತಾಕರ್ಷಕ ಕನ್ನಡ ಚಿತ್ರ
ನಮ್ಮ ಊರು
ಪಾತ್ರ : ಉದಯಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ ಶ್ರೀ ಶೃಂಗೇರಿ ಜಗದ್ಗುರು
ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ
ಕನ್ನಡದಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೃದ್ಧಿ
ವಿಚಾರಗಳ ಏಕೈಕ ಸ್ವತಂತ್ರ ಮಾಸಪತ್ರಿಕೆ ; ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿ, ಗೌ॥, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರ ಧರ್ಮಪ್ರಚಾರಸಭಾ, ಹೊಂಗನೂರು
ಗೋರಕ್ಷಣಾ ಆಫೀಸು ಸತ್ಯವಾದಿ ಪ್ರೆಸ್, ಚಾಮರಾಜಪುರಂ ಮೈಸೂರು 4
ವಿಳಾಸ— ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by Dharmaprachara Nirata
M. S. Krishna Rao (Proprietor) at the Satyavadi Press
Chamarajapuram, Mysore 4